ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(1)ವರ್ಗ–01/2014–15

ದಿನಾಂಕ : 04–06–2014

**ಜ್ಞಾಪನ**

ವಿಷಯ :– ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ವರ್ಗದ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ 2014 ರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಹಾಗೂ ತಿರಸ್ಕೃತ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ :– ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 22 ಸೇನೌವ 2013 ದಿನಾಂಕ: 07–06–2013.

2 :– ಸರ್ಕಾರದ ಆದೇಶ ಸಮಖ್ಯೆ : ಸಿಆಸುಇ 29 ಸೇನೌವ 2014 ದಿನಾಂಕ: 26–05–2014

3 :– ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ : 22–05–2014 ಮತ್ತು 28–05–2014.

* * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ವರ್ಗದ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ 2014–15 ನೇ ಸಾಲಿನಲ್ಲಿ ವರ್ಗಾವಣೆಯನ್ನು ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಉಲ್ಲೇಖಿತ (1) ಮತ್ತು (2) ರ ಸರ್ಕಾರದ ಆದೇಶ ಹಾಗೂ ಉಲ್ಲೇಖಿತ (3) ರ ಈ ಕಛೇರಿಯ ಸುತ್ತೋಲೆಯನ್ವಯ ಪರಿಶೀಲಿಸಲಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಮಾಡಬಹುದಾಗಿರುವ ಕಛೇರಿ / ವೃಂದಗಳ ವರ್ಗಾವಣೆಗೆ ಅರ್ಹರಿರುವ ಹಾಗೂ ತಿರಸ್ಕೃತ ಅಧಿಕಾರಿ ಹಾಗೂ ಸಿಬ್ಬಂಧಿಗಳ ಆದ್ಯತಾ ಪಟ್ಟಿಯನ್ನು ಇಲಾಖೆಯ ವೆಬ್ ಸೈಟ್ ವಿಳಾಸ : www.schooleducation.kar.nic.in ರಲ್ಲಿ ಪ್ರಕಟಿಸಲಾಗಿದೆ.

ನಮೂನೆ – 1 :– ಕೋರಿಕೆಯ ವರ್ಗಾವಣೆಗೆ ಅರ್ಹರಿರುವ ಹಾಗೂ ಅರ್ಹರಿಲ್ಲದೇ ಇರುವ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳ ಹುದ್ದೆವಾರು ಆದ್ಯತಾ ಪಟ್ಟಿ.

ನಮೂನೆ –2 :– ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವವರ ಹುದ್ದೆವಾರು ಆಧ್ಯತಾ ಪಟ್ಟಿ.

**ಕೌನ್ಸಿಲಿಂಗ್ ವಿವರ :–**

**ಕೋರಿಕೆ ಹಾಗೂ ಪರಸ್ಪರ ವರ್ಗಾವಣೆ :–**

| | |
|---|---|
| **ಕೌನ್ಸಿಲಿಂಗ್ ದಿನಾಂಕ :** | 06–06–2014 |
| **ವರ್ಗಾವಣೆ ಕೌನ್ಸಿಲಿಂಗ್ ನಡೆಯುವ ಸ್ಥಳ** | ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಶಿಕ್ಷಕರ ಸದನ, ಕಾವೇರಿ ಭವನ ಎದುರು, ಕೆ.ಜಿ. ರಸ್ತೆ, ಬೆಂಗಳೂರು |
| **ಕೌನ್ಸಿಲಿಂಗ್ ಸಮಯ** | ಬೆಳಿಗ್ಗೆ : 11–00 ಗಂಟೆಗೆ – ಕೋರಿಕೆ ವರ್ಗಾವಣೆ<br>ಮಧ್ಯಾಹ್ನ : 12–30 ಗಂಟೆಗೆ – ಪರಸ್ಪರ ವರ್ಗಾವಣೆ |

<u>ಅಂತರಾಯುಕ್ತಾಲಯ</u> <u>ವರ್ಗಾವಣೆ :-</u>

| | |
|---|---|
| ಕೌನ್ಸಿಲಿಂಗ್ ದಿನಾಂಕ : | 07-06-2014 |
| ವರ್ಗಾವಣೆ ಕೌನ್ಸಿಲಿಂಗ್ ನಡೆಯುವ ಸ್ಥಳ | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. ಸಭಾಂಗಣ. |
| ಕೌನ್ಸಿಲಿಂಗ್ ಸಮಯ | ಬೆಳಿಗ್ಗೆ : 11-00 ಗಂಟೆಗೆ – ಕೋರಿಕೆ ವರ್ಗಾವಣೆ |

ಬೆಂಗಳೂರು ಆಯುಕ್ತಾಲಯದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಲ್ಲಿ ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗೆ ಅರ್ಹರಿರುವ ಅಧಿಕಾರಿ / ನೌಕರರುಗಳು ದಿನಾಂಕ : 06-06-2014 ರಂದು ಹಾಗೂ ಅಂತರ ಆಯುಕ್ತಾಲಯ ಕೋರಿಕೆ ವರ್ಗಾವಣೆ ಕೋರಿರುವ ಅಧಿಕಾರಿ / ನೌಕರರುಗಳು ದಿನಾಂಕ : 07-06-2014 ರಂದು ಖುದ್ದಾಗಿ ಮೇಲ್ಕಂಡ ಸಮಯದಲ್ಲಿ ಹಾಜರಿರುವಂತೆ ತಿಳಿಸಿದೆ.

(ಕೆ.ಎಸ್. ವೆಂಕಟೇಶಪ್ಪ)
ಅಪರ ಆಯುಕ್ತರು(ಆಡಳಿತ)

ಗೆ,

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲಬರ್ಗಾ
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ನಿರ್ದೇಶಕರುಗಳಿಗೆ.
3) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ಜಂಟಿ ನಿರ್ದೇಶಕರುಗಳಿಗೆ,
4) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲ ಉಪ ನಿರ್ದೇಶಕರು (ಆಡಳಿತ) ಹಾಗೂ (ಅಭಿವೃದ್ಧಿ).
5) ಕಛೇರಿ ಪ್ರತಿ.